# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1242**
**ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ ರುದ್ರಪ್ಪ**
**ಉತ್ತರಿಸುವ ದಿನಾಂಕ : 30-09-2020**
**ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರು.**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಸಂಸ್ಥೆಯ ಖಾಯಂ ಸಿಬ್ಬಂದಿಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠ ಮತ್ತು ಸರ್ಕಾರವು ಜಾರಿ ಮಾಡಿದ ಆದೇಶದಂತೆ ಮುಂಬಡ್ತಿ ನೀಡಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು: | ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠ ಮತ್ತು ಸರ್ಕಾರದ ಆದೇಶದನ್ವಯ ಸಹ ಶಿಕ್ಷಕರಿಗೆ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡುವ ಹುದ್ದೆಗಳಿಗೆ ದಿನಾಂಕ:17.06.2020ರಂದು ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ 310 ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ನಿಯಮಾನುಸಾರ ಸಹ ಶಿಕ್ಷಕರಿಗೆ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲು ಕ್ರಮವಹಿಸಲಾಗುತ್ತಿದೆ. |
| ಆ) | ಕರ್ನಾಟಕ ನಾಗರೀಕ ಸೇವಾ ನಿಯಮ-1957ರ ಸೇವಾ ಜೇಷ್ಠತಾ ನಿಯಮಗಳು ಕ್ರೈಸ್ ನೌಕರರಿಗೆ ಅನ್ವಯಿಸುತ್ತವೆಯೇ: (ವಿವರ ನೀಡುವುದು) | ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ-1957ರ ಜೇಷ್ಠತಾ ಸೇವಾ ನಿಯಮಗಳು ಅನ್ವಯಿಸುವುದಿಲ್ಲ. ಆದರೆ, ಸಂಘದ ವೃಂದ ಮತ್ತು ನೇಮಕಾತಿಯ ನಿಯಮಗಳಲ್ಲಿ ಈ ನಿಯಮಗಳನ್ನು ಅಳವಡಿಸಿಕೊಂಡು, ಅವುಗಳ ಅನುಸಾರ ಕ್ರಮವಹಿಸಲಾಗುತ್ತಿದೆ. |
| ಇ) | ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳ ಜೇಷ್ಠತಾ ಪಟ್ಟಿಗಳು ಎಷ್ಟು ವಿಧಗಳಲ್ಲಿವೆ? (ಅವುಗಳ ವಿವರವನ್ನು ಹುದ್ದೆ ಮತ್ತು ವೃಂದವಾರು ವಿವರ ನೀಡುವುದು. | ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು 3 ವಿಧಗಳಲ್ಲಿದೆ. ವಿವರಗಳನ್ನು ಈ ಕೆಳಕಂಡಂತಿದೆ. (ಸಂಯುಕ್ತ ವೃಂದ, ಉಳಿಕೆ ಮೂಲ ವೃಂದ, ಹೈದರಾಬಾದ್-ಕರ್ನಾಟಕ ವೃಂದ)<br>1 - ಪ್ರಾಂಶುಪಾಲರು ಜೇಷ್ಠತಾ ಪಟ್ಟಿ.<br>2 - ಶಿಕ್ಷಕರ ಸಂಯುಕ್ತ ಜೇಷ್ಠತಾ ಪಟ್ಟಿ (ಕನ್ನಡ, ಆಂಗ್ಲ, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ. ದೈಹಿಕ ಶಿಕ್ಷಣ, ಗಣಕಯಂತ್ರ, ಸಂಗೀತ ಶಿಕ್ಷಕರು)<br>3 - ನಿಲಯಪಾಲಕರ ಜೇಷ್ಠತಾ ಪಟ್ಟಿ.<br>4 - ಪ್ರಥಮ ದರ್ಜೆ ಸಹಾಯಕರು ಕಂ ಕಂಪ್ಯೂಟರ್ ಆಪರೇಟರ್ ಜೇಷ್ಠತಾ ಪಟ್ಟಿ.<br>5 - ಸ್ಟಾಫ್ ನರ್ಸ್ ಜೇಷ್ಠತಾ ಪಟ್ಟಿ.<br>6 - ದ್ವಿತೀಯ ದರ್ಜೆ ಸಹಾಯಕರು ಕಂ ಕಂಪ್ಯೂಟರ್ ಆಪರೇಟರ್ ಜೇಷ್ಠತಾ ಪಟ್ಟಿ. |

**ಸಂಖ್ಯೆ: ಸಕಇ 319 ಮೊದೇಶಾ 2020**

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ
ಸಮಾಜ ಕಲ್ಯಾಣ ಇಲಾಖಾ ಸಚಿವರು.